480 (851) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಆಶ್ರಯ ಮನೆಗಳನ್ನು ಹಂಚಲು ಉದ್ದೇಶಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಆ) ಕಳೆದ ಮೂರು ಸಾಲುಗಳಲ್ಲಿ ಹಂಚಿಕೆ ಮಾಡಿದ ಆಶ್ರಯ ಮನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು, ವರ್ಷಾವಾರು ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ರಾಜ್ಯದಲ್ಲಿ 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಯಾವುದೇ ಮನೆಗಳ ಗುರಿಯನ್ನು ನೀಡಿರುವುದಿಲ್ಲ. ಆದರೆ 2005–06ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ 40 ಅಂದರೆ ಒಟ್ಟು 226080 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ನಗರ ಆಶ್ರಯ ಯೋಜನೆಗೆ ಸಂಬಂಧಪಟ್ಟಂತೆ 2006–07ನೇ ಸಾಲಿನಲ್ಲಿ ಯಾವುದೇ ಮನೆಗಳ ಗುರಿಯನ್ನು ನೀಡಿರುವುದಿಲ್ಲ. ಆದರೆ 2005–06ನೇ ಸಾಲಿನಲ್ಲಿ ಒಟ್ಟು 50,000 ಮನೆಗಳ ಗುರಿಯನ್ನು ನೀಡಲಾಗಿದ್ದು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಜಿಲ್ಲಾವಾರು ವಿವರಗಳನ್ನು ಅನುಬಂಧ–'ಅ' ನಲ್ಲಿ ನೀಡಲಾಗಿದೆ.

2005–06 ನ್ನು ಸೇರಿದಂತೆ ಒಟ್ಟು ಬ್ಯಾಕ್‌ಲಾಗ್ ಮನೆಗಳಲ್ಲಿ 2,30,000 ಆಶ್ರಯ ಮನೆಗಳನ್ನು 2006–07 ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಕಳೆದ ಮೂರು ಸಾಲುಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾದ ಮನೆಗಳ ಜಿಲ್ಲಾವಾರು ಹಾಗೂ ವರ್ಷವಾರು ವಿವರಗಳನ್ನು ಅನುಬಂಧ 'ಬ' ನಲ್ಲಿ ನೀಡಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ಸಾಲುಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆ ಮಾಡಲಾದ ಮನೆಗಳ ತಾಲ್ಲುಕುವಾರು ಹಾಗೂ ವರ್ಷವಾರು ವಿವರಗಳನ್ನು ಅನುಬಂಧ ನಲ್ಲಿ ನೀಡಲಾಗಿದೆ.

ಅನುಬಂಧ–'ಅ'

ರಾಜ್ಯದಲ್ಲಿ 2005–06ನೇ ಸಾಲಿನಲ್ಲಿ ಹಂಚಿಕೆ ಮಾಡಿದ ಮನೆಗಳ ಜಿಲ್ಲಾವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	ಗ್ರಾಮೀಣ ಆಶ್ರಯ 2005–2006	ನಗರ ಆಶ್ರಯ 2005–2006
1	ಬಾಗಲಕೋಟೆ	6520	3185
2	ಬೆಂಗಳೂರು ಗ್ರಾಮಾಂತರ	9120	1750

3	ಬೆಂಗಳೂರು ನಗರ	4480	210
4	ಬೆಳಗಾವಿ	19400	3230
5	ಬಳ್ಳಾರಿ	7560	4565
6	ಬೀದರ್	7000	2520
7	ವಿಜಾಪುರ	7960	1670
8	ಚಾಮರಾಜನಗರ	4800	855
9	ಚಿಕ್ಕಮಗಳೂರು	9040	865
10	ಚಿತ್ರದುರ್ಗ	7400	1815
11	ದಕ್ಷಿಣ ಕನ್ನಡ	8120	970
12	ದಾವಣಗೆರೆ	9200	890
13	ಧಾರವಾಡ	5080	4315
14	ಗದಗ್	4240	2865
15	ಗುಲ್ಬರ್ಗಾ	13480	2815
16	ಹಾಸನ	10320	2120
17	ಹಾವೇರಿ	8240	2860
18	ಕೊಡಗು	3920	310
19	ಕೋಲಾರ	12240	2335
20	ಕೊಪ್ಪಳ	5360	1460
21	ಮಂಡ್ಯ	9280	590
22	ಮೈಸೂರು	9400	2365
23	ರಾಯಚೂರು	6560	1090
24	ಶಿವಮೊಗ್ಗ	10400	1860
25	ತುಮಕೂರು	12840	2095
26	ಉಡುಪಿ	5840	255
27	ಉತ್ತರ ಕನ್ನಡ	8280	140
	ಒಟ್ಟು	**226080**	**50000**

ಅನುಬಂಧ–'ಇ'

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು, ವರ್ಷವಾರು ವಿವರ (ಗುರಿ)

ಗ್ರಾಮೀಣ ಆಶ್ರಯ

	2003–2004	2004–2005	2005–2006
ಭದ್ರಾವತಿ	1171		1560
ಹೊಸನಗರ	234		1160
ಸಾಗರ	694		1400
ಶಿಕಾರಿಪುರ	547	ಗುರಿ	1720
ಶಿವಮೊಗ್ಗ	797	ನಿಗದಿಪಡಿಸಿರುವುದಿಲ್ಲ	1480

ಸೊರಬ	1107		1560
ತೀರ್ಥಹಳ್ಳಿ	246		1520
ಒಟ್ಟು	**4796**		**10400**

ಶಿವಮೊಗ್ಗ ಜಿಲ್ಲೆಯ ಪಟ್ಟಣವಾರು, ವರ್ಷವಾರು ವಿವರ (ಗುರಿ)

ನಗರ ಆಶ್ರಯ

	2003–2004	2004–2005	2005–2006
ಭದ್ರಾವತಿ	15		375
ಹೊಸನಗರ	0		10
ಕರಗಲ್	0		40
ಸಾಗರ	12	ಗುರಿ	210
ಶಿಕಾರಿಪುರ	12	ನಿಗದಿಪಡಿಸಿರುವುದಿಲ್ಲ	125
ಶಿವಮೊಗ್ಗ	400		735
ಶಿರಾಳಕೊಪ್ಪ	17		75
ಸೊರಬ	0		155
ತೀರ್ಥಹಳ್ಳಿ	0		135
ಒಟ್ಟು	**456**		**1860**

481 (852) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ತಾಲ್ಲೂಕು ತೀರ್ಥಮತ್ತೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಅಕ್ರಮವಾಗಿ ಅಕ್ಕಿ ಸಾಗಿಸಿದ್ದು, ಇದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗ್ರಾಮ ಪಂಚಾಯ್ತಿ ಅಧ್ಯಕ್ಷರ ಸದಸ್ಯತ್ವವನ್ನು ರದ್ದುಗೊಳಿಸಲು ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳು, ಶಿವಮೊಗ್ಗ ಜಿಲ್ಲಾ ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆಯೇ? ಹೌದಾದಲ್ಲಿ ಯಾವಾಗ;

ಇ) ತೀರ್ಥಹಳ್ಳಿ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳು ಪತ್ರ ಬರೆದು ಸುಮಾರು ಎಂಟು ತಿಂಗಳಾದರೂ ಜಿಲ್ಲಾ ಪಂಚಾಯತ್ ನಿರ್ವಹಣಾಧಿಕಾರಿಗಳು ಕ್ರಮ ಕೈಗೊಳ್ಳದಿರಲು ಕಾರಣವೇನು? ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಬಂದಿದೆ.